Regd. No M. 1299 SATYAVADI Founded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು).

ಸಂಪುಟ 30 ಸಂಚಿಕೆ 242 | ಶುಕ್ರವಾರ 23—5—47 | ಬಿಡಿ ಪ್ರತಿ 3 ಸೈ

ಧ- ಯು. ಸ. ಬುಲೆಟಿನ್ ನಂ. 5

ಪ್ರಚಾರಕ—ರಾಜಾ ಎಸ್ ಗುರುರಾಜಾ ಚಾರ್ಯ. ಅಖಿಲ ಕರ್ನಾಟಕ ಸನಾತನಿಗಳ ಸಂಘ, ಮಂತ್ರಾಲಯ.

ಇಂದಿನ ವರ್ತಮಾನ

ಅಮೃತಸರ ಮೆ 21 — ಇಲ್ಲಿ ನಡೆದ ಗಲಭೆಯಲ್ಲಿ 9 ಮಂದಿ ಇರಿಯಲ್ಪಟ್ಟಿದ್ದಾರೆ. ಗೌರ್ನರು ಗಲಭೆ ಸ್ಥಳಕ್ಕೆ ಭೇಟಿ ಇತ್ತರು.

ಲಂಡನ್ ಮೇ 21 — ಸಂಜೆಯಾ ದೊಡನೆ ಇಲ್ಲಿಯ ಕೇಂದ್ರ ಬಂದೀ ಖಾನೆಯಲ್ಲಿರುವ ರಾಜಕೀಯ ಖೈದಿಗಳ ಒಂದು ತಂಡವು ಅಲ್ಲಿಯ ಪಾಶೀ ಕಂಭಕ್ಕೆ ಬೆಂಕಿ ಹತ್ತಿಸಿ: ಖೈದಿಗಳಿದ್ದ ಅನೇಕ ಶಿಬಿರಗಳ ಬೀಗ ಒಡೆದು ಜೈಲು ಮುಖ್ಯಾಧಿಕಾರಿಯ ಮೇಲೆ ಅತ್ಯಾಚರ ನಡೆಸಿದರು. ಜೈಲಿನ ಉಗ್ರಾಣಕ್ಕೆ ಬೆಂಕಿ ಇಟ್ಟರು ಮಿಲಿಟರಿ ಸಹಾಯ ಕರೆ ಸಲ್ಪಟ್ಟಿತು. ಟೇರ್ ಗ್ಯಾಸು ಉಪ ಯೋಗಿಸಲಾಯಿತು.

ಲಾಹೋರು 22 — ಲಾಹೋರಿನ ಪರಿಸ್ಥಿತಿ ತೀವ್ರವಾಗಿದೆ. ಮನೆ ಸುಡಾಟ ಬಾಂಬು ಎಸೆದಾಟ ಎದ್ದಿತು

ಲಂಡನ್ ಮೇ 22 — ಶುಕ್ರವಾರ ನಡೆಯುವ ಮಂತ್ರಿಮಂಡಲದ ಸಭೆಯಲ್ಲಿ ಭಾರತ ವೈಸರಾಯರು ಹಾಜರಿರುವರೆಂದು ಹೇಳಲಾಗಿದೆ.

ಲಂಡನ್ ಮೆ 21 — ಮಂತ್ರಿಮಂಡಲದ ಮೇ 16 ರ ಯೋಜನೆಯನ್ನು ಭಾರತ ಮುಖಂಡರು ಒಪ್ಪಬಹುದೆಂದು ಇನ್ನು ಕ್ರಿಪ್ಸ್‌ರ ನಂಬಿಕೆ ಈ ಬಗ್ಗೆ ಬ್ರಿಟಿಷ ರಾಜರು ಭಾರತ ಮುಖಂಡರಿಗೆ ಮನವಿ ಮಾಡಬಹುದೆಂದು ಹೇಳಲಾಗಿದೆ.

ಗೋಪಿಟ್ಟಿಸಾಳ್ಯ. ಮೆ 20 — ಕೊಯಮುತ್ತೂರು ಜಿಲ್ಲಾ ಗೋಪಿಚೆಟ್ಟಿ ಪಾಳ್ಯದಲ್ಲಿ ಜೂಕ್ ತಿಂಗಳ ಮೊದಲನೇ ವಾರಗಲ್ಲಿ ನಡೆಯುವ ತವಿಳು ನಾಡು ಹಿಂದೂ ಮಹಾಸಭೆಯ ನಾಲ್ಕನೇ ಅಧಿವೇಶನದ ಏರ್ಪಾಡು ಭರಾಟೆಯಿಂದ ನಡೆಯುತ್ತಿದೆ

ನವದೆಹಲಿ ಮೆ 21 — ಭಾರತದಲ್ಲಿ 4 ನರೆ ಪೌಲಿಯ ಟ್ಟ ಆಹಾರ ಸಾಲದೆಂದೂ ಜುಲೈ ಆಗಸ್ಟು ಮಾಹೆಗಳು ಕ್ಲಿಷ್ಟ ಕಾಲವೆಂದು ಪ್ರಸಾದರು ತಿಳಿಸಿರುವರು.

ಈರುಳ್ಳಿ ಕಾಳ ಸಂತೆ

ಕೊಲಂಬೋ ಮೇ 20 — ಸಿಲೋನಿನಲ್ಲಿ ಕಾಳ ಸಂತೆ ವ್ಯಾಪಾರದಲ್ಲಿ ಕೆಂಪು ಈರುಳ್ಳಿ ಬೆಲೆ 112 ಪೌಂಡಿಗೆ ರೂ. 21 ರಿಂದ 27 !

ಬೊಂಬಾಯಿನಿಂದ 100 ತಂತಿಗಳು

ಬೊಂಬಾಯಿನಲ್ಲಿ ಶ್ರೀ ಕಠಪಾತ್ರ ಜೀಯವರನ್ನು ಬಂಧಿಸಿದ್ದಕ್ಕೆ ಪ್ರಚಂಡ ಖಂಡನಾ ಸಭೆ ನಡೆದು ಪ್ರಮುಖ ವ್ಯಕ್ತಿಗಳೂ ಸಂಘ ಸಂಸ್ಥೆಗಳೂ ಸೇರಿ ವೈಸರಾಯರವರಿಗೆ ಶ್ರೀ ಸ್ವಾಮಿಜಿಯವರನ್ನು ಬಿಡಬೇಕೆಂದು 100 ತಂತಿ ಕಳುಹಿಸಿದ್ದಾರೆ.

ಮಂತ್ರಾಲಯದಲ್ಲಿ

ಶ್ರೀ ಸ್ವಾಮೀಜಿಯವರನ್ನು ಬಂಧಿಸಿದ್ದಕ್ಕಾಗಿ ಖಂಡನಾ ಸಭೆ 3 ನೇ ಸಲ ಸೇರಿ ಸರ್ಕಾರದ ನೀತಿಯನ್ನು ಖಂಡಿಸಿ ಕೂಡಲೇ ಸ್ವಾಮಿಜಿಯವರನ್ನು ಬಿಡ ಬೇಕೆಂದು ವೈಸರಾಯರಿಗೂ ಕಾಂಗ್ರೆಸ್ ಹಿಂದೂ ಜನರ ಪ್ರತಿನಿಧಿಯಲ್ಲ ! ಬ್ರಿಟಿಷರು ಅಧಿಕಾರ ಸೂತ್ರಗಳನ್ನು ಕಾಂಗ್ರೆಸಿಗೆ ವಹಿಸ ಕೂಡದು ಸನಾತನಿಗಳ ಹಿತರಕ್ಷಣೆ ಮಾಡದಿದ್ದಲ್ಲಿ ಪರಿಸ್ಥಿತಿ ಪೂರ್ಣ ಹದಗಡುತ್ತದೆಂದು ಬ್ರಿಟಿಷ್ ಮುಖ್ಯ ಮಂತ್ರಿಗಳಿಗೂ ಟಿಲಿಗ್ರಾಮನ್ನು ಅಖಿಲ ಕರ್ನಾಟಕ ಸನಾತನಿಗಳ ಸಂಘದವರು ಕಳುಹಿಸಿದ್ದಾರೆ.

ಧರ್ಮ ಯುದ್ಧದಲ್ಲಿ

ಭಾಗವಹಿಸಲು ಧರ್ಮವೀರರ ಆಗಮನ

ದೆಹಲಿಯಲ್ಲಿ ನಡೆದಿರುವ ಧರ್ಮ ಯುದ್ಧದಲ್ಲಿ ಸೇರಲು ಕಾಶಿ, ಅಯೋಧ್ಯಾ, ಬೃಂದಾವನ, ಹರಿದ್ವಾರ, ಹಿಮಾಲಯಾ ತಪ್ಪಲು, ಭೇಲ್ಸಾ ಬಸ್ತೀ, ಔನ್ಪುರ, ಸೀತಾಪುರ, ಫೈಜಾಬಾದ್ ಆಲೀಘಡ್, ಮೊದಲಾದ ಕಡೆಗಳಿಂದ ಸನ್ಯಾಸಿಗಳೂ ಧರ್ಮ ವೀರರೂ ದೆಹಲಿಗೆ ಬಂದು ಸೇರುತ್ತಿದ್ದಾರೆ. ಮತ್ತು ಯು. ಪಿ. ಬಹಾರ್ ಪ್ರಾಂತೀಯ ಕಾಂಚೀ ಕಾಮಕೋಟೀ ಪೀಠ ಕುಂಭಕೋಣ, ಬಿಕಾನೀರ್, ನಂದರ ಬುಲಂದ್ ಶಹರ್ ಬಿಲ್, ಖುವಾ. ಬಿಜ್ರಾಪುರ ಗಳಿಂದ ಧರ್ಮ ಸಂಘದ ಮಂತ್ರಿಗಳು ಧರ್ಮವೀರರೊಡನೆ ಹೆಹಲಿಗೆ ಬಂದಿದ್ದಾರೆ.

ವೀರಕ್ತಿನಿಂದ 27 ಧರ್ಮವೀರಂದಳಗಳು ಬರುತ್ತಿದೆಯೆಂದು ಗೊತ್ತಾಗಿದೆ. ಧರ್ಮವೀರರು ನಾವುಂದೆ ತಾವುಂದೆ ಎಂದು ದೆಹಲಿಗೆ ಬರುತ್ತಿದ್ದಾರೆ

ವೃದ್ಧನ ಉತ್ಸಾಹ

ಸತ್ಯಾಗ್ರಹದಲ್ಲಿ ಸೇರಲು ದೆಹಲಿಗೆ ಬಹುವೃದ್ಧನೊಬ್ಬ ಮಾರ್ವಾಡಿ ಶ್ರೀಮಂತ ಬಂದಿದ್ದಾನೆ ಈತನನ್ನು ಸತ್ಯಾಗ್ರಹಕ್ಕೆ ಬೇಡವೆಂದು ಹೇಳಿದ್ದರಿಂದ ಆತನು ಇಲ್ಲಿ ಸೇರಿರುವವರಿಲ್ಲದಕಿಂತ ನಾನು ಧರ್ಮಾಭಿಮಾನದಲ್ಲಿ ತರುಣನನ್ನು ಸೇರಿಸಲೇಬೇಕೆಂದು ಹಟ ತೊಟ್ಟಿದ್ದಾನಂತೆ !

ವೃದ್ಧನ ಉತ್ಸಾಹ ನೋಡಿ ತರುಣರು ಹುರುಪುಗೊಂಡಿದ್ದಾರೆ.

ಮಹಾರಾಜರೂ ಸತ್ಯಾಗ್ರಹಕ್ಕೆ ಬಂದಿದ್ದಾರೆ

ಒಂದು ಸಾವಿರ ಧರ್ಮವೀರರನ್ನು ಕರೆದುಕ್ಕೊಂದು ಶ್ರೀ ಸಿಂಗರಾವಣ ಮಹಾರಾಜರು ಧರ್ಮಯುದ್ಧದಲ್ಲಿ ಭಾಗವಹಿಸಲು ದೆಹಲಿಗೆ ಬಂದಿದ್ದಾರೆ.

[ನಾಳೇ ಪತ್ರಿಕೆಯಲ್ಲಿ ಮುಂದುವರಿಯುವುದು]

ನೇಪಾಲ ಮಹಾರಾಜರ ತೀರ್ಪು

ದೇವಾಲಯ ಪ್ರವೇಶ ಚಳವಳಿಗಾರರಿಗೆ ಶಿಕ್ಷೆ

ನೇಪಾಳ ಸಂಸ್ಥಾನದಲ್ಲಿ ಅಸ್ಪೃಶ್ಯತಾ ನಿರ್ಮೂಲನೆಗಾಗಿ ಪ್ರಚಾರವನ್ನು ಮಾಡುತ್ತಿದ್ದ 6 ಮಂದಿಯನ್ನು ವಿಚಾರಣೆಗೆ ಗುರಿ ಮಾಡಿದರು. ನೇಪಾಳದ ಮಹಾರಾಜರ ಅಧ್ಯಕ್ಷತೆಯಲ್ಲಿಯೇ ಈ ವಿಚಾರಣೆಯು ನಡೆಯಿತು. ಪ್ರಾಸಿಕ್ಯೂಷನ್ ವಾದವೇನೆಂದರೆ — ಇವರು ಸಂಸ್ಥಾನದ ಮತವಾದ ಹಿಂದೂ ಮತಕ್ಕೆ ಕೇಡನ್ನುಂಟು ಮಾಡುತ್ತಾ ತನ್ಮೂಲವಾಗಿ ಪ್ರಜೆಗಳಲ್ಲಿ ಅಶಾಂತತೆಯನ್ನುಂಟು ಮಾಡುತ್ತಿರುವರೆಂದು.

ನೇಪಾಳದ ಮಹಾರಾಜರೂ ತಮ್ಮ ಮಂತ್ರಿಮಂಡಲಿಯು ಅಂಗೀಕಾರದೊಂದಿಗೆ ಅವರಲ್ಲಿ ನಾಲ್ಕು ಮಂದಿಗೆ ಒಂದು ವರ್ಷದ ಶಿಕ್ಷೆಯನ್ನು ವಿಧಿಸಿದರು ಮಿಕ್ಕ ಇಬ್ಬರೂ ನೇಪಾಳ ರಾಜ್ಯದಲ್ಲಿ ಇನ್ನು ಮುಂದೆ ಈ ಒಗೆಯ ಚಳುವಳಿಯನ್ನು ಮಾಡದಿರುವದಾಗಿ ಜಾಮೀನು ಕೊಟ್ಟದ್ದರಿಂದ ಬಿಡುಗಡೆ ಮಾಡಲ್ಪಟ್ಟರು.

(ಅಡ್ವಾನ್ಸ್ – ಕಲ್ಕತ್ತಾ)

ಸಕ್ಕರೆಗಿಂತ ಸಿಹಿ!

ತೋಟದಲ್ಲಿ ಬೆಳೆಯುವ ತರಕಾರಿಯೊಂದರಿಂದ ಜೆರೂಸಲಂನಲ್ಲಿ ಕಬ್ಬಿನ ಸಕ್ಕರೆಗಿಂತ ೧೫ ಹೆಚ್ಚು ಸಿಹಿಯಾಗಿರುವ ಸಕ್ಕರೆಯನ್ನು ತಯಾರಿಸಲು ಕಂಡು ಹಿಡಿಯಲಾಗಿದೆ.

ಪೂಜಾರಿಗಳು ಕೆಲಸ ಮಾಡುತ್ತಿಲ್ಲ

20—4—47 ರಲ್ಲಿ ಸಿಂಹಾಚಲ ಕ್ಷೇತ್ರದಲ್ಲಿಯೂ ಶ್ರೀ ವರಾಹ ನರಸಿಂಹ ಸ್ವಾಮಿಯವರ ದೇವಾಲಯದ ಗರ್ಭಗುಡಿಯೊಳಕ್ಕೆ ಹರಿಜನರು ಬಿಡಲ್ಪಟ್ಟರು. 21—4—47 ರಿಂದ ಬಹಳ ಮಂದಿ ಅರ್ಚಕರು ಕೆಲಸಕ್ಕೆ ಹೋಗುತ್ತಿಲ್ಲ. ಪ್ರತಿವರ್ಷ ವೈಶಾಖ ಶುದ್ಧದಿಗೆ ನೊದಲ್ಗೊಂಡು ತಿಂಗಳು ಕಾಲ ಮಾಡಲ್ಪಡಬೇಕಾದ ಚಂದನ ಕೈಂಕರ್ಯ ಕಾರ್ಯವು ಈ ವರ್ಷ ನಡೆಯಲಿಲ್ಲ. ಚಂದನ ಸೇವೆಯನ್ನು ಮಾಡದಿದ್ದಲ್ಲಿ ದೇಶಾರಿಷ್ಟವೆಂದು ತಿಳಿದವರು ಹೇಳುತ್ತಾರೆ. ಏನಾಗುವದೋ ನೋಡಬೇಕಾಗಿದೆ.

ಇಂದಿನ ವರ್ತಮಾನ

ಮೂರನೇ ಪ್ರಪಂಚ ಮಹಾ ಯುದ್ಧವು 1964 ರಲ್ಲಿ ಆರಂಭವಾಗುವುದೆಂದು ಶಾಸ್ತ್ರಜ್ಞರು ಲೆಕ್ಕಾಚಾರ ಮಾಡಿ ನಿರ್ಧರಿಸಿದ್ದಾರೆ.

ಎಂಥಾ ಬಿರುಗಾಳಿ ಬೀಸುತ್ತಿದ್ದರೂ ಸಮುದ್ರದಲ್ಲಿ ಅಲೆಗಳು ಸಮುದ್ರ ಮಟ್ಟಕ್ಕಿಂತ 11 ಅಡಿಗಿಂತ ಎತ್ತರವಾಗಿ ಏಳುವುದಿಲ್ಲ.

ಪ್ರಪಂಚದಲ್ಲೆಲ್ಲಾ ಅತಿ ಸ್ಥೂಲಕಾಯನೂ ಡ್ಯಾನಿಯಲ್ ಲ್ಯಾಂಬೆರ್ಟ್. ಅತನ ತೂಕ 52 ಮುಕಾಲು ಸ್ಟೋನುಗಳು. ಎತ್ತರ 5 ಅಡಿ 11 ಅಂಗುಲ.

'ಗೆಜೆಟ್' ಅನ್ನುವುದು ಇಟಾಲಿಯನ್ ಭಾಷೆಯ ಪದ. ಅದಕ್ಕೆ ಅರ್ಥ ಸೋಮಾರಿ ಅಥವಾ ಹುಚ್ಚು ಹಾರಿ ಹೊಡೆಯುವವನು.

ಬಟ್ಟೆಗಳ ಅಭಾವವು ಎಲ್ಲೆಡೆಗಳಲ್ಲಿಯೂ ಇದೆ. ಅಸ್ಸಾಂ ರೈಲ್ವೆ ಲೈನಿನ ಒಂದು ಸ್ಟೇಶನ್ನನ್ನು ದಾಟಿದ ತರುವಾಯ ಗ್ರಾಮಸ್ಥರು ಬಟ್ಟೆಗಳ ಬೇಲುಗಳಿದ್ದ ರೈಲಿನ ಮೇಲೆ ಕಲ್ಲುಗಳನ್ನು ಎಸೆದು ನಿಲ್ಲಿಸಿ ಬೇಲುಗಳನ್ನು ದೋಚಿಕೊಂಡು ಹೋಗಿದ್ದಾರೆ.

Coming Shortly atOpera

Office of the President
M5 P 160 / 46-7 City Municipal Council
Mysore, dated the 20 th May 47

NOTIFICATION

Notice is hereby given to the inhabitants of the Mysore City Municipality that the Municipal Council have resolved to introduce the Bye-Laws framed under section 51 (1) (d) (ii) for the control of cattle Marke t and shandy area and obtaining of the license for carrying on the business of cattle brokerage.

Any person having any objection in respect of the proposed bye-laws may prefer the same in writting to the undersigned within a month from the date of publication of this notification in the Mysore Gazette after which no objections will be received.

Copies of the detailed notification may be had in the City Municipal Office or in any of the Section Offices.

(sd) R. Ramachandra Rao Bhombore
President

Edited, Printed and Published by M. S Krishna Rao at the Satyavadi Press Chamaraj Agrahar, Mysore.

ಮೈಸೂರು ಸಿಟಿ ಮ್ಯುನಿಸಿಪಾಲಿಟಿ ತಾ| 17-5-47

ಪ್ರಕಟಣೆ

ನಗರದ ಕೆಲವು ಭಾಗಗಳಲ್ಲಿ ಮ್ಯುನಿಸಿಪಲ್ ರೆಗ್ಯುಲೇಷನ್ ಪ್ರಕಾರ ಲೈಸನ್ಸ್ ಪಡೆದು ವ್ಯಾಪಾರ ಮಾಡಬೇಕಾದ ಕೆಲವು ಕಸಬುಗಳು (Trades) ಲೈಸನ್ಸ್ ಇಲ್ಲದೆ ನಡೆಯುತ್ತಿರುವುದಾಗಿ ಕಂಡು ಬಂದಿದೆ. ಈ ರೀತಿ ಲೈಸನ್ಸ್ ಪಡೆಯದೆ ಸದರೀ ಕಸಬುಗಳನ್ನು ನಡೆಸುವುದು ಕಾನೂನಿಗೆ ವಿರೋಧವಾಗಿರುವುದರಿಂದ ಈ ಪ್ರಕಟಣೆಯ ಮೂಲಕ ಜನರಿಗೆ ತಿಳಿಯಪಡಿಸುವುದೇನೆಂದರೆ — ಈ ಲಾಗಾಯ್ತು ಹದಿನೈದು ದಿನಗಳ ಒಳಗಾಗಿ ಲೈಸನ್ಸ್ ಪಡೆಯದಿದ್ದಲ್ಲಿ ರೂಲ್ಸ್ ಪ್ರಕಾರ ಮಾಲೀಕರ ಮೇಲೆ ಮುಂದಲ ಕ್ರಮ ಜರುಗಿಸಲಾಗುತ್ತೆ.

(ಸಹಿ) ಇ. ಆನಂದರಾವ್,
ಹೆಲ್ತ್ ಆಫೀಸರ್.

At Opera

6 ನೇ ವಾರ

ಟಿ. ಎಸ್. ಬಾಲಯ್ಯ,
ತಪಮಣಿದೇವಿ, ಮಾಲತಿ,
ರಾಮುಚಂದ್ರ ನಟಿಸಿರುವ

ರಾಜಕುಮಾರಿ

(ತಮಿಳು)

SHAKTI SUDHA

A Superb TONIC